ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ದಿನಾಂಕ : DATE : 20/4/202

**ಸುಪ್ರೀಂ ಕೋರ್ಟ್ ಮಧ್ಯಂತರ ಆದೇಶ** 15 ದಿನದಲ್ಲೇ ಸಮಿತಿ ಸುಪರ್ದಿಗೆ ದೇಗುಲದ ಆಡಳಿತ

# ಗೋಕರ್ಣ ದೇಗುಲ ನಿರ್ವಹಣೆಗೆ ಸಮಿತಿ

ನವದೆಹಲಿ: ಉತ್ತರಕನ್ನಡದ ಪ್ರಸಿದ್ಧ ಗೋಕರ್ಣ ಮಹಾಬಲೇಶ್ವರ ದೇವಾಲಯದ ಆಡಳಿತವನ್ನು ಸುಪ್ರೀಂ ಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಬಿ.ಎನ್.ಶ್ರೀಕೃಷ್ಣ ನೇತೃತ್ವದ ಮೇಲ್ವಿಚಾರಣಾ ಸಮಿತಿಯ ಸುಪರ್ದಿಗೆ ವಹಿಸಿ ಸೋಮವಾರ ಸುಪ್ರೀಂ ಕೋರ್ಟ್ ಮಹತ್ವದ ಆದೇಶ ನೀಡಿದೆ. ಜತೆಗೆ, 15 ದಿನಗಳೊಳಗಾಗಿ ಈ ಪ್ರಕ್ರಿಯೆ ನಡೆಯುವಂತೆಯೂ ಸೂಚಿಸಿದೆ.

2008ರ ಆ.12ರಂದು ಅಂದಿನ ಬಿಜೆಪಿ ಸರ್ಕಾರ ಮಹಾಬಲೇಶ್ವರ ದೇಗುಲದ ಆಡಳಿತವನ್ನು ಶ್ರೀ ರಾಮಚಂದ್ರಾಪುರ ಮಠದ ಸುಪರ್ದಿಗೆ ವಹಿಸಿತ್ತು. ಆದರೆ, ಸರ್ಕಾರದ ಈ ಆದೇಶವನ್ನು ಕರ್ನಾಟಕ ಹೈಕೋರ್ಟ್ 2018ರ ಆ.10ರಂದು ವಜಾ ಮಾಡಿತ್ತು. ಇದನ್ನು ಪ್ರಶ್ನಿಸಿ ರಾಮಚಂದ್ರಾಪುರ ಮಠವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಸೋಮವಾರ ಈ ಪ್ರಕರಣಕ್ಕೆ ಸಂಬಂಧಿಸಿ ಆದೇಶ ನೀಡಿದ ಸಿಜೆಐ ಎಸ್.ಎ. ಬೋಬ್ಡೆ ನ್ಯಾ.ಎ.ಎಸ್. ಬೋಪಣ್ಣ ಮತ್ತು ನ್ಯಾ.ವಿ. ರಾಮಸುಬ್ರಮಣಿಯನ್ ಅವರನ್ನೊಳಗೊಂಡ ನ್ಯಾಯಪೀಠ, 'ಮಧ್ಯಂತರ



ವ್ಯವಸ್ಥೆಯೆಂಬಂತೆ, ಗೋಕರ್ಣ ಮಹಾಬಲೇಶ್ವರ ದೇವಾಲಯವು ಇನ್ನು ಮುಂದೆ ನಿವೃತ್ತ ನ್ಯಾ.ಶ್ರೀಕೃಷ್ಣ ನೇತೃತ್ವದ ಸಮಿತಿಯ ಮೇಲ್ವಿಚಾರಣೆಯಲ್ಲಿ ಕಾರ್ಯನಿರ್ವಹಿಸಲಿದೆ. ರಾಮಚಂದ್ರಾಪುರ ಮಠವು ಕೂಡಲೇ ಗೋಕರ್ಣ ದೇಗುಲದ ಆಡಳಿತವನ್ನು ಸಮಿತಿಗೆ ಹಸ್ತಾಂತರಿಸಬೇಕು. ಸಮಿತಿಯು ದೇವಾಲಯದ ಎಲ್ಲ ಸಂಪ್ರದಾಯ ಹಾಗೂ ಧಾರ್ಮಿಕ ಆಚರಣೆಗಳ ಪಾಲನೆಯಾಗುವಂತೆ ನೋಡಿಕೊಳ್ಳಬೇಕು' ಎಂದು ಸೂಚಿಸಿದೆ.

**ತೀರ್ಪನ್ನು ಗೌರವಿಸುತ್ತೇವೆ. ಗೋಕರ್ಣ ದೇವಾಲಯದಿಂದ ಹಣ, ಅಧಿಕಾರ, ಪ್ರತಿಷ್ಠೆ ಇಂಥ ಯಾವ ಪ್ರತಿಫಲಾಪೇಕ್ಷೆಯೂ ನಮಗೆ ಇರಲಿಲ್ಲ. ಸಮಾಜದ ಹಿತಕ್ಕಾಗಿ ಶ್ರೀಮಠ ಕಾನೂನು ಹೋರಾಟ ಕೈಗೆತ್ತಿ ಕೊಂಡಿತ್ತು. ಇದು ಮುಂದುವರಿಯಲಿದೆ.**

**• ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿ,**
ಶ್ರೀರಾಮಚಂದ್ರಾಪುರಮಠ

ಇದೇ ವೇಳೆ, ಉತ್ತರ ಕನ್ನಡದ ಎಸ್‌ಪಿ ಹಾಗೂ ಉಪ ಆಯುಕ್ತರು, ಕುಮಟಾ ವಿಭಾಗದ ಸಹಾಯಕ ಆಯುಕ್ತರು, ಇಬ್ಬರು ಖ್ಯಾತ ವಿದ್ವಾಂಸರು ಹಾಗೂ ಸಂಬಂಧಪಟ್ಟ ಟ್ರಸ್ಟ್‌ನ ಇಬ್ಬರು ಉಪಾಧಿಭಕ್ತರು ಕೂಡ ಈ ಮೇಲ್ವಿಚಾರಣಾ ಸಮಿತಿಯಲ್ಲಿ ಇರಲಿದ್ದಾರೆ. ಅಂತಿಮ ತೀರ್ಪು ನೀಡುವವರೆಗೂ ಈ ವ್ಯವಸ್ಥೆಯೇ ಮುಂದುವರಿಯಲಿದೆ ಎಂದೂ ನ್ಯಾಯಪೀಠ ಹೇಳಿದೆ.